ಚಿಂತಾಮಣಿ ತಾಲ್ಲೂಕು ಕೋಟಗಲ್ ವಾಸಸ್ಥರಾಗಿ ಮೃತಪಟ್ಟ ಯಜ್ಞ್ಞನಾರಾಯಣ ಶಾಸ್ತ್ರಿಗಳ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ತ್ರಿಯಂಬಕ ಶಾಸ್ತ್ರೀರ ಅರ್ಜೀಯನ್ನು 1884ನೇ ಇಸವಿ ಡಿಶಂಬರ್ ತಿಂಗಳು ತಾರೀಖು 4ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಯಜ್ಞ್ಞನಾರಾಯಣ ಶಾಸ್ತ್ರಿಗಳ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ನವಂಬರ್ ತಿಂಗಳು ತಾರೀಖು 7ಲ್ಲು ಕೋರ್ಟು ಮೊಹರ್‌ನೀಲೇ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕ್ರೈಸ್,
ಸಬ್ ಜಡ್ಜ್.

ಸೆಂಟ್ರಲ್ ಜೈಲ್.

ಇಸ್ತಿಹಾರ್‌ನಾಮಾ.

ತಾರೀಖು 4ನೇ ನವಂಬರ್ 1884.

ಇದರಿಂದ ಪ್ರಕಟಿಸಲ್ಪಡುವದೇನಂದರೆ,—ಬೆಂಗಳೂರು ಸೆಂಟ್ರಲ್ ಜೈಲ್‌ನಲ್ಲಿಯೂ, ಡಿಸ್ಟ್ರಿಕ್ಟು ಲಾಕಪ್ಪಿನಲ್ಲಿಯೂ, ಖೈದ್ ಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಯೆ ಬೇಕಾದ ಆಹಾರ ಪದಾರ್ಥಗಳು ವಗೈರೇ ದರೋಬಸ್ತು ಜಿನಸಿಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಕೊಡಲ್ಪಡುವ ಬಂದು ಮಾಡಲ್ಪಟ್ಟ ದರಖಾಸ್ತುಗಳನ್ನು ಸ್ಯ 1884ನೇ ಇಸವಿ ಡಿಶಂಬರ್ 1ನೇ ತಾರೀಖಿನ ವರಿಗೆ ಸೆಂಟ್ರಲ್ ಜೈಲ್ ಸೂಪರ್‌ಟಿಂಡೆಂಟರವರು ತೆಗದುಕೊಳ್ಳುವರು.

2. ಮೇಲೆ ಕಂಡ ತಾರೀಖಿಗೆ ತರುವಾಯ ದರಖಾಸ್ತುಗಳು ಯಾವವೂ ತೆಗದುಕೊಳ್ಳಲ್ಪಡಲಾರವು.

3. ದರಖಾಸ್ತುಗಳ ಮೇಲೆ "ಸೆಂಟ್ರಲ್ ಜೈಲಿಗೂ, ಡಿಸ್ಟ್ರಿಕ್ಟು ಲಾಕಪ್ಪಿಗೂ ಜಿನಸೀಗಳ ಸರಬರಾಯಿ ಬಗ್ಯೆ ದರಖಾಸ್ತುಗಳು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

4. ನಗದಾಗಿಯಾಗಲಿ ಕರೆನ್ಸಿ ನೋಟುಗಳ ಮೂಲಕವಾಗಿಯಾಗಲಿ, 500 ರೂಪಾಯಿಗಳ ಡಿಪಾಜಿಟ್ ದೇಖೀಲ್ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಸೆಂಟ್ರಲ್ ಜೈಲ್ ಸೂಪರ್‌ಟಿಂಡೆಂಟರವರಿಂದ ಅವರ ಆಫೀಸಿನಲ್ಲಿ ಮೇಲೆ ಕಂಡ ತಾರೀಖಿನೊಳಗೆ ಅಲ್ಲಿಗೆ ಬರುವದಕ್ಕೆ ಖಾಯಿಷ್ ಮಾಡುವ ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ ಈಕೆಳಿಗೆ ಬರುವ ವಳ್ಳೀತರಹಾದ ಜಿನಸೀಗಳನ್ನು ರೂಪಾಯಿ 1ಕ್ಕೆ ಪೂರ್ಡ್ ತೂಕದ ಪ್ರಕಾರ ಸರಬರಾಯಿ ಮಾಡತಕ್ಕ ದರವನ್ನು ನಮೂದಿಸತಕ್ಕದ್ದು.

ಅಕ್ಕಿ	ಹೇ ಅಕ್ಕಿ ವ ಕುದಪಲ ಅಕ್ಕಿ	...	ತರಕಾರಿ
ರಾಗಿ	.. ..	..	ಹುರಳಿ
ಬೇಳೆ	.. ..	..	ಚವೆ
ಅವರೆ	.. ..	..	ಸಕ್ಕರೆ
ಮೊಂಸ	.. ..	..	ಕಾಫಿ
ಮೊಸರು	.. ..	...	ತೇ ಯಲೆ
ಯಳ್ಳೆಂಣೆ	.. ..	..	ರೊಟ್ಟಿ
ತುಪ್ಪ	.. ..	..	ಹಾಲು
ಹುಣಸೇಹಣ್ಣು	.. ..	..	ಶೇಗೆಕಾಯಿ
ಉಪ್ಪು	.. ..	..	ಸಬ್ಬು
ಮಸಾಲೆ ಪುಡಿ	.. ..	..	ಗೇರುಬೀಜ
ಈರುಳ್ಳಿ	.. ..	..	ಮೆಣಸು
ಬೆಳ್ಳುಳ್ಳಿ	.. ..	..	ಮಣಗಿದ ಸಾಮೆ

7. ದರಖಾಸ್ತು ಪಟ್ಟಿಯಲ್ಲಿ ಮೇಲೆನಮೂದಿಸಿದ ಪದಾರ್ಥಗಳಿಗೆ ಮೂತ್ರವಲ್ಲದೆ ದೀಪದ ಯಂತ್ರ, ಕೆರೋಜಿರ್ಯ ಯಂತ್ರ, ಮಂಣಿನ ಹರಿವಾಣಗಳು, ಲೋಟುಗಳು, ಪರಿಕೆ ವಗೈರೆ ಪದಾರ್ಥಗಳಿಗೂ ದರಗಳು ನಮೂದಿಸಬೇಕು. ಕಂಟ್ರಾಕ್ಟುದಾರನು ಖೈದಿಗಳಿಂದ ಬೀಸಲ್ಪಡುವ ಬಗ್ಗೆ ರಾಗಿಯನ್ನು ಸರಬರಾಯಿ ಮಾಡತಕ್ಕದ್ದು. ಮತ್ತು ಹಿಟ್ಟಾಗಿ ಕೊಡಲ್ಪಡುವದು, ರಾಗಿ ಧಾರಣೆ ಪ್ರಕಾರ ಸರಬರಾಯಿ ಮಾಡಿದ್ದನ್ನು ಹಾಗೆ ಕೊಡಲ್ಪಟ್ಟ ಪರಿಮಾಣದ ಮೇಲೆ ಲೆಕ್ಕ ಮಾಡಿ ಅದರಂತೆ ಮೊಬಲಗು ಪಾವತೀ ಮಾಡಲ್ಪಡುತ್ತೆ.

8. (ನಾನಾ ಸ್ಕೇಲ್‌ಗಳ ಮೇಲೆ ಯಿರುವ ರೋಜಿನಾ 750 ಮಂದಿ ಖೈದಿಗಳಿಗಾಗಿ) ಈ ಸಂವತ್ಸರಕ್ಕೆ ಬೇಕಾಗಬಹುದಾದ ಮುಖ್ಯ ಪದಾರ್ಥಗಳ ಅಂದಾಜಾ ಇದರಹೀ ಕಂಡಂತೆ ಯಿರತಕ್ಕದ್ದು.

	ಪೌಂಡುಗಳು.		ಪೌಂಡುಗಳು.
ರಾಗಿ ..	.. 346,340	ಯಳ್ಳೆಂಣೆ ..	.. 2,361
ಅಕ್ಕಿ ..	.. 78,471	ಬೆಲ್ಲ ..	.. 10,417
ತೊಗರಿ ಅಥವಾ ಅವರೆ	.. 52,083	ಮಸಾಲೆ ಪುಡಿ ..	.. 7,986
ತರಕಾರಿ ..	.. 104,161	ಈರುಳ್ಳಿ ..	.. 10,417
ಮಾಂಸ ..	.. 23,612	ಸಾದೆ ..	.. 416,667
ತುಪ್ಪ ..	.. 2,361		

9. ಸೂಪರ್‌ಟೆಂಡೆಂಟರವರು, ಯಾವ ದರಖಾಸ್ತನ್ನಾಗಲಿ ಕಾರಣವನ್ನು ತಿಳಿಸದೇಯೇ ನಿರಾಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ವಿಳಿಸಿಕೊಂಡು ಯಿರುತ್ತಾರೆ.

10. ಮಂಜೂರಾದ ದರಖಾಸ್ತುದಾರನ ಠೇವಣೀ ಮೊಬಲಗು ನಿಲ್ಲಿಸಿಕೊಳ್ಳಲ್ಪಟ್ಟು ಅವನು ಗುತ್ತಿಗೇಚೀಟು ಬರದುಕೊಡಲಿಕ್ಕಾಗಲಿ ತನ್ನ ಗುತ್ತಿಗೆ ಮಂಜೂರಾದ್ದು ತನಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು ಬಂದು ವಾರದೊಳಗಾಗಿ ನಗದಾಗಿ ಯಾ ಗವರ್ನಮೆಂಟ್ ಪತ್ರಗಳ ಮೂಲಕ 1,500 ರೂಪಾಯಿಗಳಿಗೆ ಜಾಮೀನು ಕೊಡಲಿಕ್ಕಾಗಲಿ ತಪ್ಪಿದರೆ ಸದರೀ ಠೇವಣೀ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

11. ಕಂಟ್ರಾಕ್ಟುದಾರನಿಗೆ ನಗದು ಅಡ್ವಾನ್ಸ್ ಯಾವದೂ ಕೊಡಲ್ಪಡಲಾರದು: ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗಾಗಿ ಮೊಬಲಗುಗಳು ಪ್ರತಿ ತಿಂಗಳ 1ನೇ ತಾರೀಖಿಗೆ ತರುವಾಯ ಕೂಡಿದಷ್ಟು ತ್ವರೆಯಾಗಿ ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟರಿಂದ ಸಲ್ಲಿಸಲ್ಪಡುವದು.

12. ಕಂಟ್ರಾಕ್ಟುದಾರನಿಗೆ ಉಗ್ರಾಣದ ಬಗ್ಗೆ ಬಂದು ಖೋಲೀಯು ಕೊಡಲ್ಪಡುವದು. ಅದರಲ್ಲಿ ನಷ್ಟವಾಗದೇ ಯಿರುವ ದರೋಬಸ್ತು ಪದಾರ್ಥಗಳನ್ನೂ ಅವನು ಯಿಟ್ಟುಕೊಳ್ಳಬಹುದು, ಮಾಂಸ ವಗೈರೆ ನಷ್ಟವಾಗತಕ್ಕ ಪದಾರ್ಥಗಳು ಪ್ರತಿ ದಿವಸ ಬೆಳಿಗ್ಯೆ 8 ಘಂಟೆಯೊಳಗೆ ಜೈಲಿಗೆ ಬಂದಿರತಕ್ಕದ್ದು.

13. ಕಂಟ್ರಾಕ್ಟು ವಳಗೇಣಿಗೆ ಕೊಡಲ್ಪಡಕೂಡದು.

14. ಕಂಟ್ರಾಕ್ಟಿನ ನಿಬಂಧನೆಗಳ ಬಾಬತು ಯಾವ ಅತಿಕ್ರಮಣಗಳಾಗಲಿ, ಯಾವದಾದರೂ ಹಲ್ಕೀ ಪದಾರ್ಥಗಳ ಸರಬರಾಯಿ ಬಗ್ಗಾಗಲಿ, ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟರ ಯಖ್ತ್ಯಾರೀ ಮೇಲೆ 150 ರೂಪಾಯಿಗಳಿಗೆ ಮಿರದ ಬಂದು ಜುರ್ಮಾನೆ ವಸೂಲ್ ಮಾಡಲ್ಪಡುವದು, ಬಾರ್ ಬಾರ್ ಅತಿಕ್ರಮ ನಡಸಿದ ಪಕ್ಷಕ್ಕೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜಾಮೀನು ಮೊಬಲಗು ಸರಕಾರಕ್ಕೆ ತೆಗದುಕೊಳ್ಳಲ್ಪಡುವದು.

15. ಕಂಟ್ರಾಕ್ಟಿನ ಅತಿಕ್ರಮಕ್ಕೆ ಸಂಬಂಧಿಸಿದ ದರೋಬಸ್ತು ಸಂಗತಿಗಳಲ್ಲಿಯೂ ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟರ ತೀರ್ಮಾನವು ಅಖೈರಾಗಿರತಕ್ಕದ್ದು.

16. ಕಂಟ್ರಾಕ್ಟುದಾರನು ಕಂಟ್ರಾಕ್ಟಿನ ದರದ ಪ್ರಕಾರವೇ ಖೈದೀಗಳ ಉಪಯೋಗಕ್ಕೋಸ್ಕರ ಜೈಲ್ ತೋಟದಿಂದ ಕಾಯಿಪಲ್ಯಗಳನ್ನು ಕೊಂಡು ಕೊಳ್ಳಬೇಕು.

17. ಹೆಚ್ಚಿಗೇ ಸಂಗತಿ ಯಾವದಾದರೂ ತಿಳಕೊಳ್ಳಬೇಕಾದರೆ ಸೂಪರ್‌ಟೆಂಡೆಂಟರ ಆಫೀಸಿನಲ್ಲಿ ಕೇಳಿ ತಿಳದುಕೊಳ್ಳತಕ್ಕದ್ದು.

18. ಈ ಕಂಟ್ರಾಕ್ಟು ಮೈಸೂರು ಸೀಮೆಯಲ್ಲಿನ ಜೈಲ್‌ಗಳ ಇನ್‌ಸ್ಪೆಕ್ಟರ್ ಜನರಲ್ಲವರ ಮಂಜೂರಾತಿಗೆ ವಳಪಟ್ಟಿರತಕ್ಕದ್ದು.

ಜೆ. ಹೆಡರ್ಸ್,
ಸೂಪರ್‌ಟೆಂಡೆಂಟ್.